**ಸಾಕ್ಷಿಗೆ ದಿನಾಂಕಃ 17.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ Smt.AS ರವರಿಂದಃ**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು ನಿ.ಪಿ.2** ಎಂದು, ಗಾಯದ ಪ್ರಮಾಣ ಪತ್ರವನ್ನು ನಿ.ಪಿ.**3** ಎಂದು, ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ನಿ.ಪಿ.**4** ಎಂದು, ಸ್ಥಳ ಪಂಚನಾಮೆಯನ್ನು ನಿ.ಪಿ.**5** ಎಂದು ಗುರುತಿಸಿದೆ.

3) **ಐ.ಎಂ.ವಿ ಕಾಯ್ದೆ ಕಲಂ 133** ರ ಅಡಿಯಲ್ಲಿ ನೀಡಿರುವಂತಹ **ನೋಟಿಸ್** ಅನ್ನು ನಿ.ಪಿ.**6** ಎಂದು ಮತ್ತು ಜಾಮೀನು ಬಂಧಪತ್ರಗಳನ್ನು ನಿ.ಪಿ.**7** ಮತ್ತು ನಿ.ಪಿ.**8** ಎಂದು, ಮತ್ತು ಮೇಲೆ ಹೇಳಿದ **ನೋಟಿಸಿಗೆ ನೀಡಿರುವಂತಹ ಉತ್ತರವನ್ನು** ನಿ.ಪಿ.**9** ಎಂದು ಗುರುತಿಸಿದೆ.

4) ಐಎಂವಿ ವರದಿಯನ್ನು ನಿ.ಪಿ.**10** ಎಂದು, ವಿಶ್ವ ಪ್ರಸಾದ್ ಎನ್ನುವವರು ಕೆ.ಜಿ.ಹಳ್ಳಿ ಪೊಲೀಸ್ ಠಾಣೆಗೆ ಬರೆದಿರುವ ಪತ್ರವನ್ನು ನಿ.ಪಿ.**11** ಎಂದು, ಮತ್ತು **Police Intimation** ಅನ್ನು ನಿ.ಪಿ.**12** ಎಂದು ಮತ್ತು ಅಂತಿಮ ವರದಿಯನ್ನು ನಿ.ಪಿ.**13** ಎಂದು ಗುರುತಿಸಿದೆ.

5) ಸಿ.ಸಿ.**29428/2024** ಪ್ರಕರಣದ ಆದೇಶದ ಹಾಳೆಗಳನ್ನು ನಿ.ಪಿ.**14** ಮತ್ತು **15** ಎಂದು ಗುರುತಿಸಿದೆ. ಆರೋಪಣೆಯನ್ನು ನಿ.ಪಿ.**16** ಎಂದು ಗುರುತಿಸಿದೆ.

**ಸೂಚನೆಃ** ನಿ.ಪಿ.1 ರಿಂದ ನಿ.ಪಿ.16 ಎಂದು ಗುರುತು ಆಗಿರುವ ದಾಖಲೆಗಳು ಮತ್ತೊಂದು ಪ್ರಕರಣದಿಂದ ಪಡೆದುಕೊಂಡಿರುವಂತಹ ಧೃಡೀಕೃತ ನಕಲುಗಳು ಆಗಿವೆ.

6) ಒಟ್ಟು **28** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**17** ಎಂದು ಗುರುತಿಸಿದೆ.

7) ಒಟ್ಟು **22 Prescriptions** ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**18** ಎಂದು ಗುರುತಿಸಿದೆ.

8) ಈಗ ಸಾಕ್ಷಿದಾರರು ತಮ್ಮ ಮೂಲ ಚಾಲನಾ ಪರವಾನಗಿ ದಾಖಲೆ ಮತ್ತು

ಇದೇ ದಾಖಲೆಯ ಫೋಟೋ ಪ್ರತಿಯನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಯನ್ನು ಮತ್ತು ಫೋಟೋ ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಯನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಯನ್ನು ನಿ.ಪಿ.**19** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

9) ಒಂದು **X-ray** ಫಿಲಂ ಹಾಜರುಪಡಿಸಿದ್ದು ಅದನ್ನು ನಿ.ಪಿ.**20** ಎಂದು ಗುರುತಿಸಿದೆ.

**ಈ ಹಂತದಲ್ಲಿ ಮತ್ತೆ ಕೆಲವು ದಾಖಲೆಗಳನ್ನು ಹಾಜರುಪಡಿಸಲು ಸಾಕ್ಷಿದಾರರು ಸಮಯ ಕೇಳಿದ್ದಾರೆ, ಸಮಯ ನೀಡಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.